ಹುಲಗಪ್ಪನಿಗೆ ನಗು ಬಂತು. ಜಾತಿ, ವಶೀಲಿ, ಹಣ ಬಳಸಿ ವೈಸ್ ಚಾನ್ಸಲರ್ ಕುರ್ಚಿಯ ಮೇಲೆ ಕೂತಿರುವ ಈವಯ್ಯನ ಭಾಷಣ ಕೇಳಿದ ಯಾರಿಗೇ ಆದರೂ, ಈತ ಎಂದಾದರೂ ಲೈಬ್ರರಿಗೆ ಹೋಗಿದ್ದಿರಲಿ, ದಿನಪತ್ರಿಕೆ ಕೂಡ ಸರಿಯಾಗಿ ಓದಿದ್ದರ ಸೂಚನೆ ಕೂಡ ಕಂಡಿರಲಿಕ್ಕಿಲ್ಲ ಎಂಬುದು ನೆನಪಾಗಿ, ಆ ಕುಹಕವನ್ನೂ ಬೆರೆಸಿ ಸುಮ್ಮನೆ ಹಲ್ಲು ಬಿಟ್ಟ!

'ಅದಿರಲಿ ರೀ, ಅದ್ಯಾರೋ ದೇಸಾಯಿ ಅಂತ ದೊಡ್ಡ ಕನ್ನಡ ರೈಟರಂತೆ ಕಣ್ರೀ. ಅವರು ಇಲ್ಲೇ ಈ ಊರ ಫೋರ್ಟ್ ಮೇಲೆ ಲೈಫ್ ಲಾಂಗ್ ರಿಸರ್ಚ್ ಮಾಡಿ ಒಂದು ಹ್ಯೂಜ್ ಬುಕ್ ಬರೀತಿದಾರಂತ್ರೀ. ಅವರು ದೇಶದಲ್ಲಿ ನೋಡದೇ ಇರೋ ಆರ್ಕೈವ್ಸೇ ಇಲ್ವಂತೆ ಕಣ್ರೀ. ನೀವು ಈಗ ಅದೇ ಟಾಪಿಕ್ ಮೇಲೆ ಸಣ್ಣ ಪುಟ್ಟ ಆರ್ಟಿಕಲ್ ಬರೆದು ಪಬ್ಲಿಷ್ ಮಾಡಿದ್ರೆ ಅವರ ಪುಸ್ತಕಕ್ಕೆ ಡ್ಯಾಮೇಜ್ ಆಗುತ್ತಂತೆ ರೀ. ಅದೆಲ್ಲ ಮಾಡೋಕೋಗ್ಬೇಡ್ರೀ. ಬೇಕಿದ್ರೆ ಅವರ ಹತ್ರ ಒಳ್ಳೊಳ್ಳೇ ಮೆಟೀರಿಯಲ್ ಇಸ್ಕೊಳ್ರೀ. ಅವರ ಪುಸ್ತಕ ಬರೋತಂಕ ನಿಮ್ಮ ರಿಸರ್ಚ್ ಔಟ್ ಪುಟ್ ಪಬ್ಲಿಷ್ ಮಾಡೋಕ್ ಹೋಗಬೇಡ್ರಿ. ರದ್ದೀ ಪೇಪರಲ್ಲೆಲ್ಲ ಪಬ್ಲಿಷ್ ಮಾಡಿದ್ರೆ ಯು.ಜಿ.ಸಿ. ರೆಕಗ್ನೈಸ್ ಮಾಡಲ್ರೀ. ಸುಮ್ನೆ ವೇಸ್ಟು. ಓಕೇ? ಅಂಡರ್ ಸ್ಟ್ಯಾಂಡ್?'

ಇಷ್ಟು ಹೇಳಿದ ವೈಸ್ ಚಾನ್ಸಲರ್, ಇದು ತನ್ನ ಕೊನೇ ತೀರ್ಮಾನ, ಇದನ್ನು ಹುಲಗಪ್ಪನೆಂಬ ಹುಳ ಪಾಲಿಸಲೇಬೇಕು ಎಂಬ ಹಮ್ಮು ಸೂಸಿ, ಇನ್ನು ಹೊರಡು ಎಂದು ಕತ್ತಿನ ಒಗೆತದಲ್ಲೇ ಸೂಚಿಸಿದ. ಹೂಂ ಅನ್ನದೆ, ಉಹೂಂ ಅನ್ನದೆ ಮಳ್ಳಿಯಂತೆ ಹೊರಟ ಹುಲಗಪ್ಪನನ್ನು ಕರೆದು, 'ಹಾಂ ಇದೆಲ್ಲ ಆ ಪೇಪರ್ ಗೀಪರ್ ನೋರ್ಗೆ ಹೇಳಿ ಇನ್ನೊಂದಿಷ್ಟು ತರಲೆ ಮಾಡ್ಬೇಡ್ರೀ. ನಿಮ್ ರಿಸರ್ಚು ಹಿಂದೆ ಡಿಸ್ ಕಂಟಿನ್ಯೂ ಆಗಿತ್ತಂತಲ್ರೀ! ಈಗ ಮತ್ತೆ ಟೆಂಪರರಿ ರಿಜಿಸ್ಟ್ರೇಶನ್ ಆಗಿದ್ಯಂತಲ್ರೀ. ಇನ್ನೇನಿದ್ರೂ

